

# ನಿಮ್ರತ್ ವೃತ್ತಿ ಧ್ಯಾನ

ಪ್ರಿಯಾಂಕಾ ಚೋಪ್ರಾಳಂತೆಯೇ ಅಂತರರಾಷ್ಟ್ರೀಯ ಖ್ಯಾತಿ ಗಳಿಸಿದ ಭಾರತದ ಮತ್ತೊಬ್ಬ ನಟಿ ನಿಮ್ರತ್ ಕೌರ್. ಆದರೆ, ಪಿಗ್ಗಿಯಷ್ಟು ಜನಪ್ರಿಯತೆ ಆಕೆಗೆ ಭಾರತದಲ್ಲಿ ಇನ್ನೂ ಸಿಕ್ಕಿಲ್ಲ. ಏಕೆಂದರೆ ನಿಮ್ರತ್ ಕಮರ್ಷಿಯಲ್ ಸಿನಿಮಾಗಳ ಬೆನ್ನತ್ತಿದವಳಲ್ಲ. 'ದಿ ಲಂಚ್ ಬಾಕ್ಸ್' ಚಿತ್ರದವರೆಗೂ ನಿಮ್ರತ್‌ಳ ಪ್ರತಿಭೆಯನ್ನು ಬಾಲಿವುಡ್ ಗುರುತಿಸಿರಲಿಲ್ಲ. ಬಳಿಕವೂ ಆಕೆಯನ್ನು ಹುಡುಕಿಕೊಂಡು ಬಂದ ಗಟ್ಟಿಯಾದ ಪಾತ್ರಗಳ ಸಂಖ್ಯೆಯೂ ತೀರಾ ಕಡಿಮೆ. ಹಾಲಿವುಡ್ ಕೈ ಬೀಸಿ ಕರೆದಾಗ ಒಲ್ಲೆ ಎನ್ನದ ನಿಮ್ರತ್, 'ಹೋಮ್‌ಲ್ಯಾಂಡ್' ಮತ್ತು 'ವೇವಾರ್ಡ್ ಪೈನ್ಸ್' ಎಂಬ ಕಿರುತೆರೆ ಕಾರ್ಯಕ್ರಮಗಳಲ್ಲಿ ನಟಿಸಿ ಮತ್ತಷ್ಟು ಹೆಸರು ಮಾಡಿದಳು. ಇಷ್ಟಾದರೂ ನಿಮ್ರತ್‌ಳ ಸಿನಿಮಾಗ್ರಫಿಯ ಪಟ್ಟಿ ಬೆಳೆಯುತ್ತಿಲ್ಲ. ತನ್ನ ಪಾಲಿಗೆ ಬಿಟೌನ್ ಪಯಣ 'ರೋಲರ್–ಕೋಸ್ಟರ್‌ನ ಸವಾರಿಯಂತೆ' ಎಂದು ಹೇಳಿಕೊಂಡಿದ್ದಾಳೆ ಆಕೆ. ಕಲಾವಿದೆಯಾಗಿ ಮತ್ತು ಪ್ರೇಕ್ಷಕರ ದೃಷ್ಟಿಯಿಂದ ಚಿತ್ರಗಳನ್ನು ಆಯ್ದುಕೊಳ್ಳುವ ಸವಾಲುಗಳಿಗೆ ಆಕೆ ಸಿದ್ಧಳಾಗಿದ್ದರೂ ಅದಕ್ಕೆ ಅನುಗುಣವಾಗಿ ಪಾತ್ರಗಳು ಸಿಗುತ್ತಿಲ್ಲ.

'ನನ್ನ ವೃತ್ತಿ ಗ್ರಾಫ್ ಸಂಪೂರ್ಣ ಅನಿಶ್ಚಿತ. ಪ್ರಾಮಾಣಿಕವಾಗಿ ಹೇಳುವುದಾದರೆ, ಇವೆಲ್ಲಾ ಹೇಗೆ ಸಂಭವಿಸುತ್ತಿವೆ ಎಂಬುದೇ ನನಗೆ ತಿಳಿಯುತ್ತಿಲ್ಲ. ನನ್ನ ಪ್ರಕಾರ, ಕಳೆದ ಮೂರು ವರ್ಷದಲ್ಲಿ ನಾನು ಅನಿಶ್ಚಿತ ಬದುಕನ್ನೇ ಜೀವಿಸಿದ್ದೇನೆ. 'ದಿ ಲಂಚ್ ಬಾಕ್ಸ್' ಬಿಡುಗಡೆಯಾದ ಬಳಿಕ ನನ್ನ ಬದುಕು ಸಂಪೂರ್ಣ 'ರೋಲರ್–ಕೋಸ್ಟರ್'ನ ಸವಾರಿಯಂತೆ ಏರಿಳಿತವಷ್ಟೇ' ಎಂದಿದ್ದಾಳೆ ನಿಮ್ರತ್.

'ಈಗ ನಾನು ಹೊಸ ಅವಕಾಶಗಳಿಗೆ ನನ್ನ ತೋಳುಗಳನ್ನು ಚಾಚಿಕೊಂಡಿದ್ದೇನಷ್ಟೇ. ಹೊಸ ಹಾದಿಗಳು, ಹೊಸ ಜಾಗ, ಹೊಸ ಸಾಹಸಗಳು... ಯಾವುದು ನನ್ನಲ್ಲಿ ಉನ್ಮಾದ ಮೂಡಿಸುತ್ತವೆಯೋ ಅವುಗಳನ್ನು ಅಪ್ಪಿಕೊಳ್ಳುತ್ತೇನೆ' ಎಂದು ತನ್ನ ಆಸೆಯನ್ನು ಹಂಚಿಕೊಂಡಿದ್ದಾಳೆ.

# ಆಥಿಯಾ-ಅರ್ಜುನ್ ಗುಲ್ಲು!

ನಿಲ್ ಶೆಟ್ಟಿಯ ಮುದ್ದಿನ ಮಗಳು ಆಥಿಯಾ ಶೆಟ್ಟಿ ಮತ್ತು ನಟ ಅರ್ಜುನ್ ಕಪೂರ್ ಇಬ್ಬರೂ ಪಾರ್ಟಿಗಳಲ್ಲಿ ತೆಕ್ಕೆ ಹಾಕಿಕೊಂಡು ಸಾಗುವುದನ್ನು ಕಂಡ ಮೇಲೂ, ಇಬ್ಬರ ನಡುವೆ ಏನೂ ಇಲ್ಲ ಎನ್ನುವ ಉತ್ತರವನ್ನು ನಂಬಲು ಸಾಧ್ಯವೇ? ಆಥಿಯಾ–ಅರ್ಜುನ್ ಹೊಸ ನಂಟು ಬೆಸೆದುಕೊಂಡಿದೆ ಎಂಬ ಸುದ್ದಿ ಬಿಟೌನ್‌ನಲ್ಲಿ ಹರಿದಾಡುತ್ತಿತ್ತು. ಇತ್ತೀಚೆಗೆ ಪುನೀತ್ ಮಲ್ಹೋತ್ರಾ ಆಯೋಜಿಸಿದ್ದ ಸಂತೋಷಕೂಟದಲ್ಲಿ ಈ ಜೋಡಿ ಒಟ್ಟಿಗೇ ಪಾಲ್ಗೊಂಡಿದೆ. ಕ್ಯಾಮೆರಾ ಕಂಡೊಡನೆ ದೂರಾಗಿದೆ. ಈ ಸಂತೋಷಕೂಟದ ಚಿತ್ರವನ್ನು ಅರ್ಜುನ್ ಇನ್‌ಸ್ಟಾಗ್ರಾಂನಲ್ಲಿ ಹಾಕಿದ್ದಾನೆ. ಅಲ್ಲಿ ಆತನ ಮಾಜಿ ಪ್ರೇಯಸಿ ಸೋನಾಕ್ಷಿ ಸಿನ್ಹಾ ಕೂಡ ಇದ್ದಳಂತೆ. ಸಂತೋಷಕೂಟದಲ್ಲಿ ಜೊತೆಯಾಗಿ ಇರದಂತೆ ಎಚ್ಚರವಹಿಸಿದ್ದ ಜೋಡಿ, ಮತ್ತೆ ಒಟ್ಟಾಗಿ ಅಲ್ಲಿಂದ ನಿರ್ಗಮಿಸಿದೆ.

ಅರ್ಜುನ್ ಮತ್ತು ಆಥಿಯಾ ಒಟ್ಟಿಗೆ ಸಿನಿಮಾಗಳಲ್ಲಿ ನಟಿಸಿಲ್ಲ. ಆದರೆ ಇಬ್ಬರಿಗೂ ಸಮಾನ ಗೆಳೆಯರಿದ್ದಾರೆ. ಆಗಾಗ್ಗೆ ಸಂತೋಷಕೂಟದಲ್ಲಿ ಸೇರಿಕೊಳ್ಳುತ್ತಾರೆ. ಅರ್ಜುನ್‌ನ ಸಹೋದರಿ ಅಂಶುಲಾ ಮತ್ತು ಆಥಿಯಾ ಇಬ್ಬರೂ ದೀರ್ಘಕಾಲದ ಸ್ನೇಹಿತೆಯರು. ಹೀಗಾಗಿ ಅರ್ಜುನ್ ಪರಿಚಯವಷ್ಟೇ. ಇಬ್ಬರೂ ಒಳ್ಳೆಯ ಗೆಳೆಯರು ಎಂದು ಆಥಿಯಾ ಹೇಳಿಕೊಂಡಿದ್ದಾಳೆ. ಆದರೆ, ಇಬ್ಬರೂ ಮುಂಬೈನ ನೈಟ್‌ಕ್ಲಬ್‌ನಲ್ಲಿ ಅಧರಕ್ಕೆ ಅಧರ ಜೋಡಿಸಿದ್ದರು ಎಂಬ ಸುದ್ದಿ ಕಾಳ್ಗಿಚ್ಚಿನಂತೆ ಬಿಟೌನ್ ಗಲ್ಲಿಯಲ್ಲಿ ಪಸರಿಸಿದೆ. ಇಬ್ಬರ ಸಂಬಂಧವನ್ನು ಆಥಿಯಾ ಸಾರಾಸಗಟಾಗಿ ತಳ್ಳಿಹಾಕಿದ್ದಾಳೆ. ಎಷ್ಟೇ ಕದ್ದುಮುಚ್ಚಿ ಹಾರಿದರೂ ಪ್ರಣಯಪಕ್ಷಿಗಳು ನಮ್ಮಿಂದ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ ಎಂದು ಕ್ಯಾಮೆರಾಗಳು ಮುಂಬೈನ ಪಾರ್ಟಿ, ಪಬ್‌ಗಳಲ್ಲಿ ಈ ಜೋಡಿಯನ್ನು ಹುಡುಕುತ್ತಿವೆ!

■ ಅಮಿ

